

## ಇದು ಹೇಗೆ ಅನನ್ಯ?

‘ಶಿಕ್ಷಣ ಎಂಬುದು ಹೇರಿಕೆ ಆಗಬಾರದು. ಮಕ್ಕಳು ಪ್ರೀತಿಯಿಂದ ಕಲಿಯಲು ಪ್ರಯತ್ನಿಸಬೇಕು. ಇಂದಿನ ಶಿಕ್ಷಣ ಪದ್ಧತಿ ಮಕ್ಕಳನ್ನು ಪುಸ್ತಕದ ಹುಳುಗಳನ್ನಾಗಿಸಿದೆ. ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಳ್ಳಲು ಆಗದೇ ಹೆಣಗಾಡುವ ಸ್ಥಿತಿ ಬಂದಿದೆ. ಶಿಕ್ಷಣವೆಂದರೆ ಭಯಪಡುತ್ತಾ ದೂರ ಉಳಿದ ಮಕ್ಕಳಿಗೆ ಶಿಕ್ಷಣದ ನಿಜವಾದ ಅರ್ಥ ಕಲಿಸುವ ನಿಟ್ಟಿನಲ್ಲಿ ಆರಂಭಿಸಿದ ಸಣ್ಣ ಪ್ರಯತ್ನ ಇದಾಗಿದೆ’ ಎನ್ನುತ್ತಾರೆ ಸಂಸ್ಥಾಪಕಿ ಡಾ. ಶಶಿ ರಾವ್.

‘ಸಂವಹನ ಭಾಷೆಯಾಗಬೇಕಿದ್ದ ಇಂಗ್ಲಿಷ್ ಹಾಗೂ ಹಿಂದಿಯನ್ನು ಶಿಕ್ಷಣದ ಮಾಧ್ಯಮಗಳ ರೂಪದಲ್ಲಿ ಹೇರಲಾಗುತ್ತಿದೆ. ಮಕ್ಕಳನ್ನು ಮಾತೃಭಾಷೆಯಿಂದ ದೂರ ಮಾಡಲಾಗುತ್ತಿದೆ. ಇಲ್ಲಿನ ಮಕ್ಕಳು ಕಲಿಯುತ್ತಿರುವುದು ಮಾತೃಭಾಷೆಯನ್ನೇ ಆದರೂ ಇಂಗ್ಲಿಷ್ ಮತ್ತು ಹಿಂದಿಯನ್ನು ಸುಲಲಿತವಾಗಿ ಮಾತನಾಡುತ್ತಾರೆ. ಇಲ್ಲಿ ಭಾಷೆಗಳನ್ನು ಪ್ರೀತಿಸಲಾಗುತ್ತದೆ, ಗೌರವಿಸಲಾಗುತ್ತದೆ’ ಎನ್ನುತ್ತಾರೆ ಅವರು.

### ‘ಮಕ್ಕಳ ಮನಸ್ಥಿತಿ ಅರಿತುಕೊಳ್ಳಬೇಕು’

ಇಲ್ಲಿರುವ ಪ್ರತಿಯೊಬ್ಬರೂ ಒಂದಿಲ್ಲೊಂದು ಕಾರಣಗಳಿಂದ ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳು. ಇವರ ಮನಸ್ಥಿತಿಯನ್ನು ಅರ್ಥೈಸಿಕೊಳ್ಳಲು ಸಮಯ ಬೇಕಾಗುತ್ತದೆ. ಮನೆಯವರಿಂದ, ಈ ಸಮಾಜದಿಂದ ಸಿಗಬೇಕಾದ ಪ್ರೀತಿಯ ಕೊರತೆಯನ್ನು ಅನುಭವಿಸುತ್ತಿರುತ್ತಾರೆ. ಹಾಗಾಗಿ ಅವರೊಟ್ಟಿಗೆ ನಾವಿದ್ದೇವೆ ಎಂಬುದನ್ನು ಪ್ರೀತಿಯಿಂದ ತಿಳಿಸಬೇಕು. ಇದರಿಂದಾಗಿ ಮಕ್ಕಳ ಆಸಕ್ತಿ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

**ಭವಾನಿ**
ಕನ್ನಡ ಶಿಕ್ಷಕಿ, ಅನನ್ಯ ಫೌಂಡೇಷನ್

ಡಾ. ಶಶಿ ರಾವ್ ಈ ಶಾಲೆಯ ರುವಾರಿ.

ಶಶಿ ರಾವ್ ಬಾಲಕಾರ್ಮಿಕರ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ಅವರ ಸ್ನೇಹಿತರೊಬ್ಬರು, ಚಿಂದಿ ಆಯುತ್ತಿದ್ದ ಮಕ್ಕಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿದ್ದರು. ಆ ಮಕ್ಕಳಿಗೆ ಶಿಕ್ಷಣ ಒದಗಿಸಬೇಕು ಎಂಬ ಕನಸನ್ನು ಶಶಿ ಅವರ ಮುಂದೆ ವ್ಯಕ್ತಪಡಿಸಿದ್ದರು. ಸ್ನೇಹಿತನ ಒತ್ತಾಸೆಯಾಗಿ ನಿಂತ ಅವರು ಇಬ್ಬರು ಮಕ್ಕಳಿಗೆ ವಾರಕ್ಕೆ 2 ದಿನ ಪಾಠ ಹೇಳಿಕೊಡಲು ಆರಂಭಿಸಿದರು. ಹೀಗೆ ಆರಂಭವಾದ ಶಿಕ್ಷಣ ನೀಡುವ ಕನಸು ‘ಅನನ್ಯ’ದ ಹುಟ್ಟಿಗೆ ಕಾರಣವಾಯಿತು.

‘ಕಲಿಯುವ ಆಸಕ್ತಿವುಳ್ಳ ಯಾರೇ ಆಗಲಿ, ಅವರಿಗೆ ಪಾಠ ಹೇಳಿಕೊಡಬೇಕೆಂಬುದು ನನ್ನ ವೃತ್ತಿಧರ್ಮವಾಗಿತ್ತು. ನನ್ನ ಹತ್ತಿರ ಪಾಠ ಹೇಳಿಸಿಕೊಳ್ಳಲು ಬರುತ್ತಿದ್ದ ಮಕ್ಕಳ ಆಸಕ್ತಿ ಕಂಡು ಬೆರಗಾದೆ. ಒಂದೇ ವಾರದಲ್ಲಿ ಮಕ್ಕಳ ಸಂಖ್ಯೆ ದುಪ್ಪಟ್ಟಾಯಿತು. ಒಬ್ಬಳಿಂದ ನಿಭಾಯಿಸಲು ಸಾಧ್ಯವಾಗದೇ ಇದ್ದಾಗ ಸ್ನೇಹಿತರ ಸಹಾಯವನ್ನು ಪಡೆದೆ. ಒಬ್ಬರಿಂದ ಒಬ್ಬರಿಗೆ ಹರಡಿಕೊಂಡ ಈ ಶಿಕ್ಷಣ ಪಯಣ ಶಾಲೆಯನ್ನು ತೆರೆಯುವಂತೆ ಪ್ರೇರೇಪಿಸಿತು’ ಎನ್ನುತ್ತಾರೆ ಶಶಿ ರಾವ್.

### ಕೌಶಲ ಕಲಿಕೆಗೆ ಹೆಚ್ಚಿನ ಒತ್ತು

ಪ್ರಸ್ತುತ 9 ವರ್ಷದಿಂದ 18 ವರ್ಷದವರೆಗಿನ 58 ಮಕ್ಕಳು ಇಲ್ಲಿದ್ದಾರೆ. ಒಬ್ಬರಿಗೊಬ್ಬರು ಜೊತೆಯಾಗಿ ಸ್ನೇಹಿತರಾಗಿ ಸಂತಸದಿಂದ ಪಾಠ ಕಲಿಯುತ್ತಿದ್ದಾರೆ. ಸೋಮವಾರದಿಂದ ಶುಕ್ರವಾರದವರೆಗೆ ಶಾಲೆ ನಡೆಯುತ್ತದೆ. ಪ್ರತಿ ಶನಿವಾರ ಮನೆಗೆ ತೆರಳುವ ಮಕ್ಕಳು ಸೋಮವಾರ ಬೆಳಿಗ್ಗೆ ಶಾಲೆಗೆ ಹಾಜರಾಗುತ್ತಾರೆ.

ಅನೌಪಚಾರಿಕ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಂಡು ತನ್ನದೇ ಆದ ಪಠ್ಯಕ್ರಮವನ್ನು ರಚಿಸಿಕೊಂಡಿರುವ ಶಾಲೆಯಿದು. ಇಲ್ಲಿನ ಮಕ್ಕಳಿಗೆ ಸಮಾಜದಲ್ಲಿ ಜೀವಿಸಲು ಅಗತ್ಯವಾದ ಪ್ರಾಥಮಿಕ ವಿಷಯಗಳನ್ನು ಕಲಿಸಲಾಗುತ್ತದೆ. ಭಾಷೆ, ಗಣಿತ, ಕ್ರೀಡೆ, ಹಾಡು, ನೃತ್ಯ ಹೀಗೆ ಎಲ್ಲಾ ವಿಭಾಗಗಳನ್ನು ಒಳಗೊಂಡ ಪಠ್ಯಕ್ರಮವನ್ನು ರೂಪಿಸಿದ್ದಾರೆ.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಪೈಪೋಟಿ ನಡೆಸಲು ಹೆಣಗಾಡುತ್ತಿರುವ ಮಕ್ಕಳ ನಡುವೆ ಅವರಿಷ್ಟದ ಕೌಶಲ್ಯದ ಕಲಿಕೆಗೆ ಒತ್ತು ನೀಡಿ ಅದನ್ನು ಕಲಿಸಲು ಗಮನಹರಿಸಲಾಗುತ್ತದೆ. ಇಲ್ಲಿಂದ ಹೊರಹೋಗುವ ಮಕ್ಕಳಿಗೆ ಅವರು ಕಲಿತ ಕೌಶಲ್ಯಕ್ಕೆ ಅನುಗುಣವಾಗಿ ಕೆಲಸ ದೊರೆಯುವಂತಾಗಬೇಕು ಎಂಬ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತದೆ.

ಮಕ್ಕಳ ವಯೋಮಾನದ ಅನುಗುಣವಾಗಿ ಆರು ತಂಡಗಳನ್ನು ಮಾಡಲಾಗಿದ್ದು, ಮಕ್ಕಳ ಕಲಿಕೆಗೆ ಅನುಗುಣವಾಗಿ ಪಾಠ ಕಲಿಸಲಾಗುತ್ತದೆ. ಪ್ರತಿದಿನ ಪತ್ರಿಕೆಗಳನ್ನು ಓದುವುದು, ಸ್ವಚ್ಛತೆಯಿಂದ ಇರುವುದು, ವಾರಕ್ಕೊಮ್ಮೆ ಪತ್ರಿಕೆ ಹೊರತರುವುದು ಇಲ್ಲಿನ ವಿಶೇಷ.

### ಓಪನ್ ಸ್ಕೂಲ್ ಪರೀಕ್ಷೆ

ಉನ್ನತ ಶಿಕ್ಷಣ ಪಡೆಯುವ ಆಸಕ್ತಿ ಇರುವಂತಹ ಮಕ್ಕಳಿಗೆ ‘ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಲರ್ನಿಂಗ್’ (ಎನ್‌ಐಒಎಸ್) ಮೂಲಕ 10ನೇ ತರಗತಿಗೆ ನೇರ ಪರೀಕ್ಷೆ ಬರೆಸಲಾಗುತ್ತದೆ. ಎಸ್‌ಎಸ್‌ಎಲ್‌ಸಿ ಪಾಸು ಮಾಡಿಕೊಳ್ಳಬೇಕೆಂದು ಬಯಸುವಂತಹ ಮಕ್ಕಳಿಗೆ ದಿನನಿತ್ಯದ ತರಗತಿ ಜೊತೆಯಲ್ಲಿ 10ನೇ ತರಗತಿ ಪರೀಕ್ಷೆ ಬರೆಯಲು ಅಗತ್ಯವಿರುವ ಅಭ್ಯಾಸವನ್ನು ಮಾಡಿಸಲಾಗುತ್ತದೆ. ನಂತರ ಅವರಿಗೆ ಇಷ್ಟವಿರುವ ವಿಷಯದ ಕುರಿತು ಓದಲು ಕಾಲೇಜಿಗೆ ಸೇರಿಸಲಾಗುತ್ತದೆ. ಕಾಲೇಜು ಶುಲ್ಕ, ಊಟ, ವಸತಿ ಎಲ್ಲವನ್ನು ಸಂಸ್ಥೆಯೇ ನಿಭಾಯಿಸುತ್ತದೆ.

### ದಾನಿಗಳಿಂದ ನಡೆಯುವ ಶಾಲೆ

ಇದು ಜನರು ನೀಡುವ ದೇಣಿಗೆಯಿಂದ ನಡೆಯುತ್ತಿರುವ ಶಾಲೆ. ಸರ್ಕಾರದಿಂದ ಹಣ ಪಡೆಯುವಂತಾದರೆ ಅದರ ಹಲವು ನಿಬಂಧನೆಗಳಿಗೆ ಒಳಪಡಬೇಕಾಗುತ್ತದೆ. ಸರ್ಕಾರ ಹೇಳುವ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸರ್ಕಾರೇತರ ಸಂಸ್ಥೆಗಳು, ಜನಸಾಮಾನ್ಯರು ನೀಡುವ ದೇಣಿಗೆಯಿಂದ ಶಾಲೆಯನ್ನು ನಡೆಸಲಾಗುತ್ತಿದೆ.

ಒಂದು ಮಗುವಿನ ಊಟ, ವಸತಿ ಹಾಗೂ ಶಿಕ್ಷಣಕ್ಕಾಗಿ ತಿಂಗಳಿಗೆ ₹ 2,000 ಖರ್ಚಾಗುತ್ತದೆ. ಶಾಲೆಯ ಬಗ್ಗೆ ತಿಳಿದಿರುವ ಜನರು, ಸಹಾಯ ಮನೋಭಾವವಿರುವ ವೃತ್ತಿಪರರು ಶಾಲೆಗೆ ಬೆನ್ನೆಲುಬಾಗಿದ್ದಾರೆ. ವಿವಿಧ ಕಂಪನಿಗಳಲ್ಲಿರುವ ಸಿಎಸ್‌ಆರ್ ಯೋಜನೆಯ ಹಣವನ್ನು ಮಕ್ಕಳ ಶಿಕ್ಷಣಕ್ಕಾಗಿ ವ್ಯಯಿಸಲಾಗುತ್ತದೆ.

### ನೀವು ಕೂಡ ಶಾಲೆಯ ಭಾಗವಾಗಬಹುದು!

ಮಕ್ಕಳಿಗೆ ಪಾಠ ಹೇಳಿಕೊಡಲು ಆಸಕ್ತಿ ಇರುವಂತವರು ಸ್ವಹಿತಾಸಕ್ತಿಯಿಂದ ಬಂದು ಮಕ್ಕಳಿಗೆ ಪಾಠ, ನೃತ್ಯ, ಆಟೋಟಗಳನ್ನು ಹೇಳಿಕೊಡಬಹುದು. ಇಂತಹ ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಆಸಕ್ತಿ ಇದ್ದರೆ ಸಂಪರ್ಕಿಸಿ: **ananyatrustindia.org**